# ವಿಧಿಯನ್ನು ಹಳಿಯಬೇಡಿ

النهي عن سب القدر

< الكنادي >

ಶೈಖ್ ಅಬ್ದುಲ್ ಅಝೀಝ್ ಇಬ್ನ್ ಅಬ್ದುಲ್ಲಾಹ್ ಇಬ್ನ್ ಬಾಝ್

الشيخ عبد العزيز بن عبد الله بن باز

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು
ಪರಿಶೀಲನೆ: ಅಬ್ದುಸ್ಸಲಾಂ ಕಾಟಿಪಳ್ಳ

**ترجمة: محمد حمزة البتوري**

**مراجعة: عبد السلام كاتيبلا**

# ವಿಧಿಯನ್ನು ಜರೆಯದಿರಿ

*ಅಲ್ರಿಯಾದ್* ಪತ್ರಿಕೆಯ 4887ನೇ ಸಂಚಿಕೆಯಲ್ಲಿ ದಿನಾಂಕ 17–09–1401 ರಂದು 'ವಿಧಿಯ ಕ್ರೌರ್ಯ' ಎಂಬ ಶೀರ್ಷಿಕೆಯಲ್ಲಿ ಒಂದು ಕೌಟುಂಬಿಕ ಕಥೆ ಪ್ರಕಟವಾಗಿತ್ತು. ಕುಮಾಶ ಇಬ್ರಾಹೀಂ ಎಂಬವಳು ಆ ಕಥೆಯ ಲೇಖಕಿ. ಕಥೆಯಲ್ಲಿ ಲೇಖಕಿ ಬರೆದ ಕೆಲವು ಸಾಲುಗಳು ಹೀಗಿದ್ದವು: *"ನಮಗೆ ಈ ಬದುಕಿನಲ್ಲಿ ಯಾವುದೇ ಹಕ್ಕುಗಳಿಲ್ಲ. ವಿಧಿಯು ಆಟವಾಡಿ ಸುಸ್ತುಗೊಳಿಸಿ, ನಂತರ ಇನ್ನೊಂದು ಲೋಕಕ್ಕೆ ಎಸೆದುಬಿಡುವ ಜೀವನ ನಮ್ಮದು. ವಿಧಿಯು ಕೆಲವೊಮ್ಮೆ ನಮ್ಮ ಕಣ್ಣೀರಿನೊಂದಿಗೆ ಕೆಲವೊಮ್ಮೆ ನಮ್ಮ ನಗೆಯೊಂದಿಗೆ ಮಜಾ ಮಾಡುತ್ತಿದೆ."*

ಈಕೆ ಬರೆದ ಈ ಸಾಲುಗಳು ತೌಹೀದಿನ ಸಂಪೂರ್ಣತೆಗೆ, ವಿಧಿಯಲ್ಲಿರುವ ಪೂರ್ಣ ವಿಶ್ವಾಸಕ್ಕೆ ವಿರುದ್ಧವಾಗಿದೆ. ಕಾರಣ, ವಿಧಿಯು ಎಂದೂ ಆಟವಾಡುವುದಿಲ್ಲ. ಈ ಬದುಕಿನಲ್ಲಿ ಏನೆಲ್ಲ ಸಂಭವಿಸುತ್ತದೋ ಅವೆಲ್ಲವೂ ಅಲ್ಲಾಹನ ನಿರ್ಣಯದ ಮೂಲಕ, ಅವನ ಅರಿವಿನ ಮೂಲಕವೇ ಸಂಭವಿಸುತ್ತದೆ. ರಾತ್ರಿ ಮತ್ತು ಹಗಲುಗಳನ್ನು ಬದಲಾಯಿಸುವವನು ಅಲ್ಲಾಹು. ಸಂತೋಷ ಮತ್ತು ವ್ಯಥೆಯನ್ನು ನಿರ್ಣಯಿಸುವವನು ಅಲ್ಲಾಹು. ಅವನು ಅವನ್ನೆಲ್ಲಾ ನಿರ್ಣಯಿಸುವುದು ಅವನ ಯುಕ್ತಿಯು ಆವಶ್ಯಪಡುವ ಪ್ರಕಾರ. ಕೆಲವೊಮ್ಮೆ ಈ ಯುಕ್ತಿಯು ಏನೆಂದು ಜನರಿಗೆ ತಿಳಿಯದೆ ಹೋಗಬಹುದು. ಕಾರಣ, ದೈವಿಕ ಯುಕ್ತಿಯನ್ನು ಪೂರ್ಣವಾಗಿ ಅರಿತುಕೊಳ್ಳುವಲ್ಲಿ ಮನುಷ್ಯರ ಜ್ಞಾನ ಸೀಮಿತವೂ, ಬುದ್ಧಿ ಅಪೂರ್ಣವೂ ಆಗಿದೆ.

ಅಸ್ತಿತ್ವದಲ್ಲಿರುವ ಎಲ್ಲವೂ ಅಲ್ಲಾಹನ ಸೃಷ್ಟಿಗಳು. ಅವನು ಅವುಗಳನ್ನು ಇಚ್ಛೆ ಮತ್ತು ಸಾಮರ್ಥ್ಯದಿಂದ ಸೃಷ್ಟಿಸಿದ್ದಾನೆ. ಅವನು ಇಚ್ಛಿಸಿದ್ದೆಲ್ಲವೂ ಸಂಭವಿಸುತ್ತದೆ. ಅವನು ಇಚ್ಛಿಸದ ಯಾವುದೂ ಸಂಭವಿಸುವುದಿಲ್ಲ. ಕೊಡುವವನು ಮತ್ತು ತಡೆಯುವವನು ಅಲ್ಲಾಹು. ಕೆಳಕ್ಕಿಳಿಸುವವನು ಮತ್ತು ಮೇಲಕ್ಕೇರಿಸುವವನು ಅಲ್ಲಾಹು. ಪರಾಕ್ರಮವನ್ನು ನೀಡುವವನು ಮತ್ತು ಪ್ರತಿಷ್ಠೆ ಕುಂದಿಸುವವನು ಅಲ್ಲಾಹು. ಸಿರಿತನ ಮತ್ತು ಬಡತನ ನೀಡುವವನು ಅಲ್ಲಾಹು. ಪಥಭ್ರಷ್ಟಗೊಳಿಸುವವನು ಮತ್ತು ಮಾರ್ಗದರ್ಶನ ಮಾಡುವವನು ಅಲ್ಲಾಹು. ಸೌಭಾಗ್ಯ ಮತ್ತು ದೌರ್ಭಾಗ್ಯ ನೀಡುವವನು ಅಲ್ಲಾಹು. ಅವನಿಚ್ಛಿಸಿದವರಿಗೆ ಅವನು ಅಧಿಕಾರವನ್ನು ನೀಡುತ್ತಾನೆ. ಅವನಿಚ್ಛಿಸಿದವರಿಂದ ಅವನು ಅಧಿಕಾರವನ್ನು ಕಸಿಯುತ್ತಾನೆ. ತಾನು ಸೃಷ್ಟಿಸಿದ ಪ್ರತಿಯೊಂದು ವಸ್ತುವನ್ನೂ ಅವನು ಸುಂದರಗೊಳಿಸಿದ್ದಾನೆ. ಅಲ್ಲಾಹನ ಪ್ರತಿಯೊಂದು ಕ್ರಿಯೆ, ಆಜ್ಞೆ ಮತ್ತು ವಿರೋಧಗಳಿಗೆ ಗಹನವಾದ ಯುಕ್ತಿ ಮತ್ತು ಪ್ರಶಂಸನೀಯ ಉದ್ದೇಶಗಳಿವೆ. ಗ್ರಹಣಶಕ್ತಿಯ ಕೊರತೆಯಿಂದ ಅವನ್ನೆಲ್ಲ ಅರ್ಥಮಾಡಿಕೊಳ್ಳಲು ಮನುಷ್ಯನಿಗೆ ಸಾಧ್ಯವಾಗದಿದ್ದರೂ ಸಹ ಮನುಷ್ಯನು ಎಲ್ಲ ಸಂದರ್ಭಗಳಲ್ಲೂ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಬೇಕು.

ಅಲ್‌ಬುಖಾರಿ ಮತ್ತು ಮುಸ್ಲಿಂ ಎಂಬ ಸಹೀಹ್ ಗ್ರಂಥಗಳಲ್ಲಿ ಹಾಗೂ ಇತರ ಗ್ರಂಥಗಳಲ್ಲಿ ವರದಿಯಾಗಿರುವ ಹದೀಸೊಂದರಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

{يَقُولُ اللَّهُ تَعَالَى: يُؤْذِينِي ابْنُ آدَمَ، يَسُبُّ الدَّهْرَ، وَأَنَا الدَّهْرُ، بِيَدِي الْأَمْرُ، أُقَلِّبُ اللَّيْلَ وَالنَّهَارَ}

رواه البخاري ومسلم

*"ಅಲ್ಲಾಹು ಹೇಳುತ್ತಾನೆ: ಆದಮನ ಮಗ (ಮನುಷ್ಯ) ನನಗೆ ಕಿರುಕುಳ ಕೊಡುತ್ತಿದ್ದಾನೆ. ಅವನು ಕಾಲವನ್ನು ಹಳಿಯುತ್ತಾನೆ. ನಾನೇ ಕಾಲ. ಆಜ್ಞೆ ನನ್ನ ಕೈಯಲ್ಲಿದೆ. ನಾನು ರಾತ್ರಿ ಮತ್ತು ಹಗಲನ್ನು ಬದಲಾಯಿಸುತ್ತೇನೆ."* [ಅಲ್‌ಬುಖಾರಿ 4549; ಮುಸ್ಲಿಂ 2246; ಅಬೂ ದಾವೂದ್ 5274; ಅಹ್ಮದ್ 2/238; ಮುವತ್ತ 1846]

ಇನ್ನೊಂದು ವರದಿಯಲ್ಲಿ:

{لَا تَسُبُّوا الدَّهْرَ، فَإِنِّي أَنَا الدَّهْرُ} رواه مسلم وأحمد ومالك في الموطأ

*"ನೀವು ಕಾಲವನ್ನು ಹಳಿಯಬೇಡಿ. ಕಾರಣ, ಖಂಡಿತವಾಗಿಯೂ ನಾನೇ ಕಾಲ."* [ಮುಸ್ಲಿಂ 2246; ಅಹ್ಮದ್ 2/496; ಮುವತ್ತ 1846]

ಇನ್ನೊಂದು ವರದಿಯಲ್ಲಿ:

{لَا يَقُلِ ابْنُ آدَمَ : يَا خَيْبَةَ الدَّهْرِ، فَإِنِّي أَنَا الدَّهْرُ، أُرْسِلُ اللَّيْلَ وَالنَّهَارَ، فَإِذَا شِئْتَ قَبَضْتُهُمَا}

رواه مسلم وأحمد ومالك في الموطأ

*"ಓ ಅನಿಷ್ಟ ಕಾಲ! ಎಂದು ಆದಮನ ಮಗ (ಮನುಷ್ಯ) ಹೇಳದಿರಲಿ. ಕಾರಣ, ಖಂಡಿತವಾಗಿಯೂ ನಾನೇ ಕಾಲ. ನಾನು ರಾತ್ರಿ ಮತ್ತು ಹಗಲನ್ನು ಕಳುಹಿಸುತ್ತೇನೆ. ನಾನು ಇಚ್ಛಿಸಿದರೆ ಅವುಗಳನ್ನು ಹಿಡಿದುಬಿಡುವೆನು."* [ಮುಸ್ಲಿಂ 2246; ಅಹ್ಮದ್ 2/275; ಮುವತ್ತ 1846]

ಜಾಹಿಲೀಕಾಲದಲ್ಲಿ ಅರಬ್ಬಿಗಳು ತಮಗೆ ಒದಗುವ ನಾಶನಷ್ಟಗಳಿಗೆ, ಅನಿಷ್ಟಗಳಿಗೆ, ಕಂಟಕಗಳಿಗೆ ಕಾಲವನ್ನು ಹಳಿಯುತ್ತಾ, ಅವನಿಗೆ ಕಾಲದ ಹೊಡೆತ ಬಿದ್ದಿದೆ; ಅವನನ್ನು ಕಾಲ ನಾಶ ಮಾಡಿದೆ ಎಂದೆಲ್ಲಾ ಹೇಳುತ್ತಿದ್ದರು. ತಮಗೆ ಎದುರಾಗುವ ಕಷ್ಟಕೂಪಗಳನ್ನು ಕಾಲದ ಮೇಲೆ ಹೊರಿಸಿ, ಕಾಲವನ್ನು ಜರೆಯುತ್ತಿದ್ದರು. ಕಾಲಕರ್ತನು ಅಲ್ಲಾಹು ಆಗಿರುವುದರಿಂದ ಅವರ ಈ ಹಳಿ, ನಿಂದನೆಗಳು ವಾಸ್ತವದಲ್ಲಿ ಅಲ್ಲಾಹನ ಬಗ್ಗೆಯಾಗಿತ್ತು. ಕಾರಣ, ಅವರಿಗೆ ಸಂಭವಿಸಿದ ಎಲ್ಲದರ ಕರ್ತನು ಅಲ್ಲಾಹು. ಆದುದರಿಂದಲೇ ಕಾಲವನ್ನು ಹಳಿಯುವುದನ್ನು ಇಸ್ಲಾಂ ವಿರೋಧಿಸಿತು. ಅಶ್ಶಾಫಿಈ, ಅಬೂ ಉಬೈದ್, ಇಬ್ನ್ ಜರೀರ್, ಅಲ್‌ಬಗವೀ ಮುಂತಾದವರು ಈ ಹದೀಸನ್ನು ವ್ಯಾಖ್ಯಾನ ಮಾಡಿದ ರೀತಿಯಿದು.

*"ನಾನು ರಾತ್ರಿ ಹಗಲುಗಳನ್ನು ಬದಲಾಯಿಸುತ್ತಿದ್ದೇನೆ"* ಎಂಬ ಅಲ್ಲಾಹನ ಮಾತಿನ ಅರ್ಥವು: ರಾತ್ರಿ ಮತ್ತು ಹಗಲಿನಲ್ಲಿ ಏನೆಲ್ಲ ಒಳಿತು ಮತ್ತು ಕೆಡುಕುಗಳು ಸಂಭವಿಸುತ್ತದೋ ಅವೆಲ್ಲವೂ ಅಲ್ಲಾಹನ ಇಚ್ಛೆ, ನಿಯಂತ್ರಣ, ಅರಿವು ಮತ್ತು ಯುಕ್ತಿಯಿಂದಲೇ ಸಂಭವಿಸುತ್ತವೆ. ಈ ವಿಷಯದಲ್ಲಿ ಅವನೊಡನೆ ಯಾವುದೇ ಸಹಭಾಗಿಗಳಿಲ್ಲ. ಅವನು ಏನನ್ನು ಉದ್ದೇಶಿಸುತ್ತಾನೋ ಅದು ಸಂಭವಿಸುತ್ತದೆ. ಅವನು ಏನನ್ನು ಉದ್ದೇಶಿಸುವುದಿಲ್ಲವೋ ಅದು ಸಂಭವಿಸುವುದಿಲ್ಲ. ಆದುದರಿಂದ ಒಳಿತು ಸಂಭವಿಸಿದರೂ, ಕೆಡುಕು ಸಂಭವಿಸಿದರೂ ಅಲ್ಲಾಹನನ್ನು ಸ್ತುತಿಸಬೇಕು. ಅವನಲ್ಲಿ ಸದ್ಭಾವನೆಯನ್ನು ಇಡಬೇಕು. ಇದು ಒಳ್ಳೆಯದಕ್ಕೇ ಆಗಿದೆ ಎಂದು ಭಾವಿಸಬೇಕು. ದೋಷ ಮತ್ತು ಪಾಪಗಳನ್ನು ತೊರೆದು ಅವನಲ್ಲಿ ಪಶ್ಚಾತ್ತಾಪಪಟ್ಟು ಕ್ಷಮೆಯಾಚಿಸಬೇಕು. ಅಲ್ಲಾಹು ಹೇಳುತ್ತಾನೆ:

﴿ وَنَبۡلُوكُم بِٱلشَّرِّ وَٱلۡخَيۡرِ فِتۡنَةٗۖ وَإِلَيۡنَا تُرۡجَعُونَ ٣٥ ﴾ [الأنبياء : ٣٥]

*"ನಾವು ಒಳಿತು ಮತ್ತು ಕೆಡುಕುಗಳನ್ನು ಒಂದು ಪರೀಕ್ಷೆಯನ್ನಾಗಿ ಮಾಡಿ ನಿಮ್ಮನ್ನು ಪರೀಕ್ಷಿಸುವೆವು. ನೀವು ನಮ್ಮ ಕಡೆಗೇ ಮರಳಿ ಬರುವಿರಿ."* [ಅಲ್‌ಅಂಬಿಯಾ 35]

ಇಮಾಂ ಮತ್ತು ಮುಜದ್ದಿದ್ ಶೈಖ್ ಮುಹಮ್ಮದ್ ಇಬ್ನ್ ಅಬ್ದಿಲ್ ವಹ್ಹಾಬ್‌ರವರು ತಮ್ಮ ಕಿತಾಬು ತ್ತೌಹೀದ್‌ನಲ್ಲಿ ಒಂದು ಅಧ್ಯಾಯವನ್ನು ರಚಿಸಿ ಅದನ್ನು *'ಕಾಲವನ್ನು ಹಳಿಯುವವನು ಅಲ್ಲಾಹನಿಗೆ ಕಿರುಕುಳ ನೀಡಿದನು.'* ಎಂದು ಹೆಸರಿಸಿದ್ದಾರೆ. ಆ ಅಧ್ಯಾಯದಲ್ಲಿ ಮೇಲಿನ ಹದೀಸನ್ನು ಉದ್ಧರಿಸಿ ಈ ಕೆಳಗಿನ ವಿಷಯಗಳ ಬಗ್ಗೆ ವಿವರಿಸಿದ್ದಾರೆ:

1. ಕಾಲವನ್ನು ಹಳಿಯುವುದನ್ನು ವಿರೋಧಿಸಲಾಗಿದೆ.
2. ಕಾಲವನ್ನು ಹಳಿಯುವುದನ್ನು ಅಲ್ಲಾಹನಿಗೆ ಕಿರುಕುಳ ಕೊಡುವುದೆಂದು ಕರೆಯಲಾಗಿದೆ.
3. 'ಅಲ್ಲಾಹನೇ ಕಾಲ' ಎಂಬ ಮಾತಿನ ಬಗ್ಗೆ ಜಿಜ್ಞಾಸೆ.
4. ಹೃದಯದಲ್ಲಿ ಅಲ್ಲಾಹನನ್ನು ಹಳಿಯುವ ಉದ್ದೇಶವಿಲ್ಲದಿದ್ದರೂ ಅವನು ಅಲ್ಲಾಹನನ್ನು ಹಳಿಯುವವನಾಗುವನು.

ಈ ಎಲ್ಲಾ ಕಾರಣಗಳಿಂದ, ಲೇಖಕಿ –ಅಲ್ಲಾಹು ಆಕೆಯನ್ನು ಕ್ಷಮಿಸಲಿ– ತನ್ನ ಕಥೆಯಲ್ಲಿ ಕ್ರೌರ್ಯವನ್ನು ಕಾಲಕ್ಕೆ ಸೇರಿಸಿ ಹೇಳಿರುವುದು ತಪ್ಪು. ಕಾರಣ, ಈಗಾಗಲೇ ವಿವರಿಸಿದಂತೆ ವಿಧಿಯು ಇಲ್ಲಿ ಆಟವಾಡುವುದಿಲ್ಲ. ಬದಲಾಗಿ, ವಿಧಿಯನ್ನು ವಿಧಿಸುವವನು ಅಲ್ಲಾಹು. ಅವನು ಅದನ್ನು ವಿಧಿಸುವುದು ಅವನ ಗಹನವಾದ ಯುಕ್ತಿಯಿಂದ. ಮಹಾಮಹಿಮನಾದ ಅಲ್ಲಾಹನನ್ನು ಕ್ರೂರಿ ಎಂದು ಬಣ್ಣಿಸಬಾರದು. ಬದಲಾಗಿ ಮಹಾಮಹಿಮನಾದ ಅಲ್ಲಾಹು ತನ್ನ ದಾಸರಿಗೆ ದಯೆ ತೋರುವವನು. ತಾಯಿಗೆ ತನ್ನ ಮಕ್ಕಳಲ್ಲಿರುವ ದಯೆಗಿಂತಲೂ ಹೆಚ್ಚು ದಯೆ ಅಲ್ಲಾಹನಿಗೆ ನಮ್ಮೊಂದಿಗಿದೆ. ಸಹೀಹಾದ ಹದೀಸಿನಲ್ಲಿ ಹೀಗಿದೆ:

{اللَّهُ أَرْحَمُ بِعِبَادِهِ مِنَ الْوَالِدَةِ بِوَلَدِهَا} رواه ابن ماجه

*"ತಾಯಿಗೆ ತನ್ನ ಮಗನಲ್ಲಿರುವ ದಯೆಗಿಂತಲೂ ಎಷ್ಟೋ ಹೆಚ್ಚು ದಯೆ ಅಲ್ಲಾಹನಿಗೆ ಅವನ ಸೃಷ್ಟಿಗಳಲ್ಲಿದೆ."* [ಇಬ್ನ್ ಮಾಜ 4297]

ಅಲ್ಲಾಹನ ಹಾಗೂ ಅವನ ರಸೂಲರ(ﷺ) ಆಜ್ಞೆಯನ್ನು ಪಾಲಿಸಲು, ತೌಹೀದನ್ನು ಪೂರ್ಣಗೊಳಿಸಲು, ತೌಹೀದಿಗೆ ವಿರುದ್ಧವಾಗಿರುವ, ಅದರ ಸಂಪೂರ್ಣತೆಗೆ ವಿರುದ್ಧವಾಗಿರುವ ವಿಷಯಗಳಿಂದ ದೂರವಾಗಲು, ಇಂತಹ ಕೈತಪ್ಪುಗಳಲ್ಲಿ ಬೀಳದಂತೆ ನಾವು ನಮ್ಮ ಲೇಖನಿಗಳನ್ನು ಜರೂರು ಹದ್ದುಬಸ್ತಿನಲ್ಲಿಡಬೇಕು. ಮಾಧ್ಯಮಗಳು ವ್ಯಾಪಕವಾಗಿ ಹಬ್ಬಿಕೊಳ್ಳುತ್ತವೆ ಮತ್ತು ಆಳವಾಗಿ ಪರಿಣಾಮ ಬೀರುತ್ತದೆಂದು ನಮಗೆ ಗೊತ್ತಿದೆ. 'ವಿಧಿಯ ಕ್ರೌರ್ಯ' ಮುಂತಾದ ಶಬ್ದಗಳನ್ನು ಮಾಧ್ಯಮಗಳು ಹೆಚ್ಚು ಹೆಚ್ಚು ಪ್ರಕಟಿಸಿದರೆ ಜನರು ಆ ಶಬ್ದಗಳನ್ನು ಬಳಸುವುದರಲ್ಲಿ ಹೆಚ್ಚು ಉದಾರಿಗಳಾಗಿ ಬಿಡುತ್ತಾರೆ.

ನಮ್ಮನ್ನು ನೇರವಾದ ಮಾರ್ಗದ ಕಡೆಗೆ ಮುನ್ನಡೆಸಲು, ಕೈತಪ್ಪುಗಳಿಂದ ಮತ್ತು ಬಾಯಿತಪ್ಪುಗಳಿಂದ ನಮ್ಮನ್ನು ರಕ್ಷಿಸಲು ನಾವು ಅಲ್ಲಾಹನೊಂದಿಗೆ ಬೇಡುತ್ತೇವೆ. ಅವನು ಎಲ್ಲವನ್ನು ಆಲಿಸುವವನೂ ಉತ್ತರ ನೀಡುವವನೂ ಆಗಿದ್ದಾನೆ.

[ಮಜ್ಮೂಉ ಫತಾವಾ ಇಬ್ನ್ ಬಾಝ್]

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********

IslamHouse.com